ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ದಿನಾಂಕಃ 20-02-2026

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಆರ್ ಎನ್ ವಕೀಲರಿಂದ,**

ಪ್ರತ್ಯೇಕವಾಗಿ ನಾನು ಈ ಪ್ರಕರಣದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣದ ವಾದಿಯರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ವಾದಿಯ ತಂದೆಯ ಹೆಸರು ಈಶ್ವರ ಇರುತ್ತದೆ. 1ನೇ ವಾದಿಯ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಮರಣ ಹೊಂದಿರುತ್ತಾರೆ. ಈ ಪ್ರಕರಣದ ವಾದಿಯರು ದಾವಾ ಆಸ್ತಿ ಖರೀದಿ ಮಾಡಿದ ಖರೀದಿ ಪತ್ರದ ಮೇಲೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಮೂಲ ಖರೀದಿದಾರನಾದ 12 ನೇ ಪ್ರತಿವಾದಿಯ ಖರೀದಿ ಪತ್ರದ ಮೇಲೆ ವಾದಿಯರ ಸಹಿ ಇತ್ತು. ವಾದಿಯರು ಯಾವ ಸ್ಥಳದಲ್ಲಿ ಹೇಗೆ ಸಹಿ ಮಾಡಿದ್ದರು ಎಂಬುವುದು ನನಗೆ ಗೊತ್ತಿಲ್ಲ, ಆದರೆ ಖರೀದಿ ಪತ್ರದ ಮೇಲೆ ವಾದಿಯರ ಸಹಿ ಇರುವುದನ್ನು ನಾನು ನೋಡಿರುತ್ತೇನೆ. 12 ನೇ ಪ್ರತಿವಾದಿ ಖರೀದಿಸಿದ ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 12 ನೇ ಪ್ರತಿವಾದಿ ಬಳಿ ಇದ್ದ ಖರೀದಿ ಪತ್ರವನ್ನು ಸನ್ 2011 ರಲ್ಲಿ ನಾನು ನೋಡಿರುತ್ತೇನೆ. ಸದ್ರಿ ಖರೀದಿ ಪತ್ರಕ್ಕೆ ವಾದಿಯರನ್ನು ಹೊರತುಪಡಿಸಿ ಇನ್ನೂ ಎಷ್ಟು ಜನ ಖರೀದಿ ಪತ್ರಕ್ಕೆ ಸಹಿ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

ದಾವಾ ಆಸ್ತಿಯನ್ನು ಖರೀದಿ ಪಡೆದ ನಂತರ ಮತ್ತು ಈ ಪ್ರಕರಣ ದಾಖಲಿಸಿದ ನಂತರ ನಾನು 12 ನೇ ಪ್ರತಿವಾದಿಯ ಬಳಿ ವಿಚಾರಣೆ ಮಾಡಲು ಹೋಗಿದ್ದೆನು, ಆದರೆ 12 ನೇ ಪ್ರತಿವಾದಿ ನನಗೆ ವಿಚಾರಣೆಗೆ ಸಿಗಲಿಲ್ಲ. 12 ನೇ ಪ್ರತಿವಾದಿ ತಾನು ಸದ್ಭಾವನಾ ಖರೀದಿದಾರ ಎಂದು ಹೇಳಿ, ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಪ್ರತಿವಾದ ಪತ್ರ ಹಾಕಿರುವುದಿಲ್ಲ ಎಂದರೆ ಸರಿ. ದಾವಾ ಸರ್ವೆ ನಂ.680/2 ರ ಆಸ್ತಿಯು ಕ್ಷೇತ್ರ 2 ಎಕರೆ 12 ಗುಂಟೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿತ್ತು ಎಂದು ನನಗೆ ತಿಳಿದಿರುತ್ತದೆ. ಸದ್ರಿ ಸರ್ವೇ ನಂಬರ ಜಮೀನಿನಲ್ಲಿ ವಾದಿಯರಿಗೆ ಯಾವುದೇ ಪಾಲು ನೀಡಿಲ್ಲ ಎಂದರೆ ಸರಿ. ಸರ್ವೆ ನಂ.680/2 ರ ಜಮೀನು ಈಗಿನ ಹಿಸ್ಸೆ ಜಮೀನುಗಳು ರಸ್ತೆಯ ಬದಿಯ ಸಮತಟ್ಟಾದ ಜಮೀನು ಇರುತ್ತದೆ ಎಂದರೆ ಸರಿ. ಸದ್ರಿ ಜಮೀನು ಸಮತಟ್ಟಾದ ರಸ್ತೆಯ ಬದಿಗೆ ಇರುವುದರಿಂದ ಅದಕ್ಕೆ ಈಗ ಭಾರಿ

ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ಸದ್ರಿ ಜಮೀನಿನಲ್ಲಿ ಮನೆ ಕಟ್ಟಲು ಉಪಯುಕ್ತ ಜಮೀನು ಇರುತ್ತದೆ ಎಂದರೆ ಸರಿ. ಆದರೆ ಕೈಗಾರಿಕೆ ಮಾಡಲು ಉಪಯುಕ್ತ ಇದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಮೂಲ ಪುರುಷ ಸೋಮಯ್ಯ ತಂದೆ ಬೋಳಾ ಯಾನೆ ಈರಾ ಯಾನೆ ಈರಪ್ಪ ನಾಯ್ಕ 1ನೇ ವಾದಿಯ ಅಜ್ಜ ಎಂದರೆ ಸರಿ. ಸದ್ರಿ ದಾವಾ ಆಸ್ತಿ 1ನೇ ವಾದಿಯ ಅಜ್ಜನಿಗೆ ಮೂಲ ಕೃಷಿಗೇಣಿ ಜಮೀನು ಆಗಿತ್ತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಭಾಗ ಆಗಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 12 ನೇ ಪ್ರತಿವಾದಿ ತಾನು ಸೋಮಯ್ಯ ಮತ್ತು ದುರ್ಗಪ್ಪ ಇವರ ಬಳಿಯಿಂದ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದು ತಿಳಿಸಿದ್ದರು. ದಾವಾ ಆಸ್ತಿ ಖರೀದಿಯ ಪೂರ್ವದಲ್ಲಿ ಹೇಗೆ ಇತ್ತೋ ಈಗಲೂ ಸಹ ಹಾಗೆ ಇರುತ್ತದೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಮ್ಮ ವಕೀಲರೇ ಮಾಹಿತಿ ನೀಡಿರುತ್ತಾರೆ. ನಾನು 4 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯ ನನಗೆ ಗೊತ್ತಿರುತ್ತದೆ. ಅದನ್ನು ನಾನು ಓದಿ ನೋಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿ ಸರ್ವೇ ನಂಬರ 680 ರ ಗಡಿಗಳು ಸರಿ ಇಲ್ಲ ಎಂದು ಬರೆದಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ 680 ರ ಜಮೀನಿನ ಚತುರ್ಗಡಿಗಳನ್ನು ಹೇಳಲು ನನಗೆ ಬರುವುದಿಲ್ಲ. ಸದ್ರಿ ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಸರ್ವೇ ನಂಬರ 680 ರ ಮೂಲತಃ ಚತುರ್ಗಡಿಗಳು ಹೇಗೆ ಇದ್ದವು ಎಂಬುದನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಈಗ ನಾನು ಖರೀದಿ ಮಾಡಿದ ದಾವಾ ಆಸ್ತಿಯ ಚತುರ್ಗಡಿ ನನಗೆ ಹೇಳಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ 1 ನೇ ವಾದಿಯ ತಂದೆ ಈಶ್ವರ ದಿನಾಂಕ 15.03.1993 ರಲ್ಲಿ ಮರಣ ಹೊಂದಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದ್ರಿ 1ನೇ ವಾದಿಯ ತಂದೆ ಮರಣ ಹೊಂದಿದ ನಂತರ ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ 1ನೇ ವಾದಿ ಮತ್ತು ಅವರ ತಾಯಿ ವಾರಸಾ ಹಕ್ಕು ದಾಖಲಾದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ 1 ನೇ ವಾದಿ ಅಪ್ರಾಪ್ತ ವಯಸ್ಕನಾಗಿದ್ದ, ಆದ್ದರಿಂದ ನಾವು ಖರೀದಿಸಿದ ದಾವಾ ಆಸ್ತಿ ಕಾನೂನುಬಾಹೀರ ಆಗಿರುತ್ತದೆ ಎಂದರೆ ಸರಿಯಲ್ಲ.

**ಡಿ.ಡಬ್ಲ್ಯು 6**

12 ನೇ ಪ್ರತಿವಾದಿಯನ್ನು ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 12 ನೇ ಪ್ರತಿವಾದಿ ಈಗ ಎಲ್ಲಿ ಇರುತ್ತಾನೆ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಸದ್ರಿ ಖರೀದಿ ಮಾಡುವ ವಿಚಾರವಾಗಿ ದಿನಪತ್ರಿಕೆಯಲ್ಲಿ ಅಥವಾ ಸಾರ್ವಜನಿಕ ಬಹಿರಂಗ ನೋಟಿಸ್ ಗಳನ್ನು ನೀಡಿದ್ದು ಇರುವುದಿಲ್ಲ ಎಂದರೆ ಸರಿ. 12 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನೋಟಿಸ್ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ವಾದಿಯ ಕವಲಿನವರು ಮತ್ತು ಪ್ರತಿವಾದಿ 1 ರಿಂದ 11 ನೇಯವರ ಕವಲಿನವರ ನಡುವೆ ವಿಭಾಗ ಆದ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ಕಾನೂನುಬದ್ಧವಾಗಿ ದಾವಾ ಆಸ್ತಿಯನ್ನು ಖರೀದಿ ಮಾಡಿಲ್ಲವಾದ್ದರಿಂದ ಮತ್ತು 1 ನೇ ವಾದಿಯ ಹಕ್ಕನ್ನು ನಷ್ಟ ಮಾಡಿರುವುದರಿಂದ ನನಗೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನ್ಯಾಯಾಶ್ರಯ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಿಭಾಗ ಆಗದೇ ಇದ್ದಾಗ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿಕೊಂಡಿರುವುದರಿಂದ ಸದ್ರಿ ಖರೀದಿ ಪತ್ರವು ಕಾನೂನುಬದ್ಧವಾಗಿ ಇಲ್ಲದೇ ಇರುವುದರಿಂದ ವಾದಿಯರ ಹಕ್ಕುಗಳಿಗೆ ಬಂಧನಕಾರಕ ಆಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಅಪ್ರಾಪ್ತ ವಯಸ್ಕನಾಗಿರುವುದರಿಂದ 12 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಸುಳ್ಳು ಮತ್ತು ಮೋಸತನದಿಂದ ಖರೀದಿ ಪತ್ರ ಮಾಡಿಕೊಂಡಿರುವುದರಿಂದ ವಾದಿಯರ ಪಾಲಿಗೆ ಖರೀದಿ ಪತ್ರ ಬಂಧನಕಾರಕ ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯವರಿಗೆ 1/10 ಅಂಶ ಪಾಲು ಪಡೆಯಲು ಕಾನೂನುಬದ್ಧ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರು ಯಾವ ಕಾರಣಕ್ಕಾಗಿ ಈ ದಾವೆಯನ್ನು ಹಾಕಿದ್ದಾರೆಂದು ನಾನು ದಾಖಲೆಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಮಾಡಿಕೊಂಡ ಖರೀದಿ ಪತ್ರ ಬೇಕಾಯ್ದೆಶಿರಿ ಆಗಿರುವುದರಿಂದ ನನಗೆ ಯಾವುದೇ ಹಕ್ಕುಪ್ರಾಪ್ತ ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಿಭಾಗ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**